**ಪಾಠ–8** **ಆಗಸ್ಟ್ 17–23**

# ಈ ಕೇವಲ ಅಲ್ಪವಾದವರಲ್ಲಿ ಒಬ್ಬನು



**ಸಬ್ಬತ್ತಿನ ಮಧ್ಯಾಹ್ನ :** ಈ ಪಾಠದ ಅಧ್ಯಯನಕ್ಕಾಗಿ ಓದಿರಿ : ಮತ್ತಾಯ 5:2–16, ಮತ್ತಾಯ 5:38–48. ರೋಮ 12:20,21, ಲೂಕ 16:19–31, ಲೂಕ 12:13–21, ಮತ್ತಾಯ 25:31–46.

**ಸ್ಮರಣವಾಕ್ಯ : ಅದಕ್ಕೆ ಅರಸನು– ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು (ಮತ್ತಾಯ 25:40).**

ಕ್ರಿಸ್ತನು ಇತರರ ವಿಷಯದಲ್ಲಿ ಕಾಳಜಿಯುಳ್ಳ ಜೀವಿತವನ್ನು ಮಾಡಿದನು, ಅದರಲ್ಲೂ ನೊಂದವರ ಮತ್ತು ಕಳೆದುಹೋದವರ ವಿಷಯದಲ್ಲಿ ಆತನು ಚಿಂತಿಸುವವನಾಗಿ ಅವರ ಬಗ್ಗೆ ಬಹಳಷ್ಟು ನುಡಿಯುವುದನ್ನು ಅವನಿಂದ ನಾವು ನಿರೀಕ್ಷಿಸಬಹುದು.

ಯೇಸುಕ್ರಿಸ್ತನ ಬೋಧನೆ ನಿಜಜೀವನಕ್ಕೆ ತಕ್ಕದ್ದಾಗಿದೆ, ದೇವರನ್ನು ಹಿಂಬಾಲಿಸಿ ಬಾಳುವುದು ಅಂದರೆ ಏನೆಂಬುದರ ಬಗ್ಗೆ ದೃಷ್ಟಿಹರಿಸುತ್ತದೆ. ಹೀಗಿರಲಾಗಿ ಕ್ರಿಸ್ತನು ಈ ಭೂಮಿಯಲ್ಲಿ ಜೀವಿಸಿದಾಗ ತಾನು ದಯೆ, ಕರುಣೆ, ನ್ಯಾಯ ಇವುಗಳನ್ನು ಹೇಗೆ ಪಾಲಿಸಿದನೋ ಹಾಗೆಯೇ ನಾವು ಕೂಡ ಪಾಲಿಸುವವರಾಗಿ ಬೇಕೆಂದು ನಮ್ಮನ್ನು ಪ್ರೇರೇಪಿಸುತ್ತಾನೆ. ನಾವು ಆತನ ಉದಾಹರಣೆಯನ್ನು ಅನುಸರಿಸುವವರಾದರೆ ಆತನಂತೆ ನಾವು ಇತರರ ಸೇವೆಯನ್ನು ಮಾಡುವವರಾಗುತ್ತೇವೆ.

ಯೇಸುಕ್ರಿಸ್ತನು ಪರಲೋಕ ರಾಜ್ಯದ ಬಗ್ಗೆಯೂ ಮಾತಾಡಿದನು. ಯೇಸುವಿನ ಬಣ್ಣನೆಯಂತೆ 'ಪರಲೋಕ ರಾಜ್ಯವು' ನಿಜವಾಗಿಯು ಇರುವಂಥದ್ದಾಗಿದ್ದು ನಾವು ಈಗಲೂ ಅದರ ಭಾಗವಾಗಿದ್ದೇವೆ. ಭೂಲೋಕದಲ್ಲಿರುವ ಆದ್ಯತೆಗಳು, ಮೌಲ್ಯಗಳು ಮತ್ತು ನೀತಿಗಳಿಗಿಂತ ವಿಭಿನ್ನವಾದ ರೀತಿಯಲ್ಲಿ ಕಾರ್ಯವೆಸಗುವ ಜೀವನಶೈಲಿ ಅಲ್ಲಿರುತ್ತದೆ. ಯೇಸುವಿನ ಬೋಧನೆಗಳು ಪರಲೋಕ ರಾಜ್ಯದ ನೀಲಿನಕಾಶೆಯುನ್ನು ನಿರೂಪಿಸುತ್ತದೆ. ನಾವು ದೇವರನ್ನು ಹೇಗೆ ಸೇವಿಸಬೇಕೆಂಬುದಕ್ಕೆ ತೀವ್ರವಾದ ಗಮನವನ್ನು (ನಿಗ ವಹಿಸುವುದನ್ನು) ಒಳಗೊಂಡಿದೆ. ಆತನನ್ನು ಸೇವಿಸುವಾಗ ಇತರರಿಗೆ ನಾವು ಹೇಗೆ ಸಂಬಂಧಿಸಿರುತ್ತೇವೆ ಎಂಬುದನ್ನೂ ಒಳಗೊಂಡಿದೆ. ಇತರರ ಉನ್ನತಿಗೆ ಅಗತ್ಯವಾದವುಗಳ ಬಗ್ಗೆ ಚಿಂತಿಸುವವರಾಗಿ ಅವರಿಗೆ ಮಾಡುವ ಸೇವೆಗಳು ನೇರವಾಗಿ ದೇವರಿಗೆ ಮಾಡುವ ಸೇವೆಯಾಗಿ ಕಂಡುಕೊಳ್ಳುತ್ತೇವೆ.

ಈ ವಾರದ ಪಾಠವನ್ನು ಆಗಸ್ಟ್ 24ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಆಗಸ್ಟ್ 18**

## ಪರ್ವತ ಪ್ರಸಂಗವನ್ನು ಪರಿಚಯಿಸುವುದು

'ಪರ್ವತ ಪ್ರಸಂಗವು' ಯೇಸುಕ್ರಿಸ್ತನು ಮಾಡಿದ ದೀರ್ಘವಾದ ಬೋಧನೆಗಳ ಸಂಗ್ರಹವಾಗಿದೆ. ಈ ಮೂರು ಅಧ್ಯಾಯಗಳು ಪರಲೋಕ ರಾಜ್ಯ ಜೀವಿತವನ್ನು ಬೋಧಿಸದೆ ಮೌಲ್ಯಗಳಾಗಿದ್ದು "ಪರಮಾನಂದಕರವಾದುದು" ಎಂಬುದಾಗಿ ಪರಿಗಣಿಸಲ್ಪಟ್ಟಿದೆ.

ಮತ್ತಾಯ 5:2–16ನ್ನು ಓದಿರಿ. ಈ ಒಂಭತ್ತು ಮೌಲ್ಯಗಳಲ್ಲಿ ಅಥವಾ "ಧನ್ಯರು" ಎಂಬುದಾಗಿ ಕರೆಯಲ್ಪಡುವ ಒಂಭತ್ತು ಬಗೆಯ ಜನರುಗಳಲ್ಲಿ ಇರುವ ಸಾಮಾನ್ಯವಾದ ಗುಣಲಕ್ಷಣ ಯಾವುದು?

ಈ ವಾಕ್ಯಗಳನ್ನು ಆಳವಾದ ಪಾರಮಾರ್ಥಿಕತೆಯೊಂದಿಗೆ ಅನ್ವಯ ಮಾಡುವಾಗ ಇವುಗಳನ್ನು ತಪ್ಪದೆ ನಿಜ ಜೀವನದಲ್ಲಿ ಓದಬೇಕು. ಯೇಸುವು ನಮ್ಮಲ್ಲಿರುವ ಮತ್ತು ಲೋಕದಲ್ಲಿರುವ ಬಡತನವನ್ನು ಗುರುತಿಸುವುದರ ಬಗ್ಗೆ ಮಾತಾಡುತ್ತಾನೆ. ಆತನು ದೀನತೆ, ಕರುಣೆ ಸಮಾಧಾನ ಪಡಿಸುವಿಕೆ,

ಹೃದಯಶುದ್ಧತೆ ಮತ್ತು ನೀತಿಯ ಬಗ್ಗೆಯೂ ಮಾತಾಡುತ್ತಾನೆ. ಕೆಲವು ಬೈಬಲ್‌ಗಳಲ್ಲಿ ನೀತಿಯನ್ನು ನ್ಯಾಯವೆಂದು ಅನುವಾದ ಮಾಡಲಾಗಿದೆ. ನಮ್ಮ ಜೀವಿತವನ್ನು ಜೀವಿಸುವಾಗ ಈ ಗುಣಗಳು ತರುವ ಕಾರ್ಯತಃ ವ್ಯತ್ಯಾಸವನ್ನು ನಾವು ಗಮನಿಸಬೇಕು. ಅಂತಹ ಕಾರ್ಯಸಾಧಕವಾದ ಓದುವಿಕೆಯನ್ನು ಯೇಸುವು ತನ್ನ ಶಿಷ್ಯರು ಭೂಮಿಗೆ ಉಪ್ಪಾಗಿರಬೇಕೆಂದು ಮತ್ತು ಲೋಕಕ್ಕೆ ಬೆಳಕಾಗಿರಬೇಕೆಂದು ಒತ್ತಾಯ ಪಡಿಸಿ ಹೇಳಿರುವ ಹೇಳಿಕೆಗಳಲ್ಲಿ ನಾವು ಓದುತ್ತೇವೆ (ಮತ್ತಾಯ 5:13–16).

ಸಂದರ್ಭಕ್ಕನುಸಾರವಾಗಿ ಉಪ್ಪು ಮತ್ತು ಬೆಳಕನ್ನು ಸರಿಯಾಗಿ ಉಪಯೋಗಿಸಿದರೆ ಅಪೇಕ್ಷಿತ ವ್ಯತ್ಯಾಸವನ್ನು ತರುತ್ತವೆ. ಆಹಾರಕ್ಕೆ ಉಪ್ಪನ್ನು ಸೇರಿಸಿದಾಗ ರುಚಿ ಬರುತ್ತದೆ ಮತ್ತು ಅದನ್ನು ಕೆಡದಂತೆ ಮಾಡುತ್ತದೆ. ನಾವು ನಮ್ಮ ನೆರೆಹೊರೆಯುವರಿಗೆ ಒಳ್ಳೆಯುವರಾಗಿರಬೇಕೆಂಬುದನ್ನು ಉಪ್ಪು ಸಂಕೇತಿಸುತ್ತದೆ. ಬೆಳಕು ಕತ್ತಲನ್ನು ದೂರಮಾಡಿ ನಮ್ಮ ಮಾರ್ಗದಲ್ಲಿರುವ ಅಪಾಯ ಅಡೆತಡೆಗಳು ಚೆನ್ನಾಗಿ ಗೋಚರಿಸುವಂತೆ ಮಾಡಿ ನಮ್ಮ ಮನೆ ಮತ್ತು ಪಟ್ಟಣವು ಕ್ಷೇಮಕರವಾಗಿರುವಂತೆ ಮಾಡುತ್ತದೆ. ಯೇಸು ಕ್ರಿಸ್ತನು ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ ಅವರು ನಿಮ್ಮ ಒಳ್ಳೆಯ ಕೆಲಸಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು ಎಂದು ಹೇಳಿದನು (ಮತ್ತಾಯ 5:16).

ಉಪ್ಪು, ಬೆಳಕು ಇವೆರಡೂ ಶಿಷ್ಯರು ತಮ್ಮ ಸುತ್ತಲೂ ಇರುವ ಜನರ ಮೇಲೆ ಪ್ರಭಾವವನ್ನುಂಟು ಮಾಡಿ ಅವರ ಜೀವನವನ್ನು ಸುಧಾರಿಸುವುದಕ್ಕೆ ಸಂಕೇತಗಳಾಗಿವೆ. ನಾವು ಸರಿಯಾಗಿ ದುಃಖಿಸುವಾಗ, ಹೃದಯಶುದ್ಧತೆ ಇರುವಾಗ ದೀನತೆಯನ್ನು ಅಭ್ಯಾಸಿಸುವಾಗ, ಕರುಣೆ ತೋರಿಸುವಾಗ, ಸಮಾಧಾನ ಪಡಿಸುವಾಗ, ಹಿಂಸೆಯನ್ನು ತಾಳಿಕೊಳ್ಳುವಾಗ, ಲೋಕಕ್ಕೆ ನಾವು ಉಪ್ಪು ಮತ್ತು ಬೆಳಕಾಗಿರುತ್ತೇವೆ. ಕ್ರಿಸ್ತನು ಈ ಪ್ರಸಂಗವನ್ನು ತನ್ನ ರಾಜ್ಯದ ಮೌಲ್ಯಗಳನ್ನು ಸಾಕಾರಗೊಳಿಸುವ ಕರೆಯೊಂದಿಗೆ ಆರಂಭಿಸುತ್ತಾನೆ.

ನಿಮ್ಮ ಸಭೆಯು ನಿಮ್ಮ ಸಮುದಾಯಕ್ಕೆ ಉಪ್ಪು ಮತ್ತು ಬೆಳಕಿನಂತೆ ಯಾವ ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ? ಸಭೆಯು ಸಮುದಾಯದಲ್ಲಿ

ಕಾರ್ಯವೆಸಗುತ್ತಿರಲಾಗಿ ಅದು ಹೇಗೆ ಉತ್ತಮ ಸ್ಥಳವಾಗಿದೆ? ನಿಮ್ಮನ್ನು ಸಮುದಾಯದಿಂದ ತೆಗೆದುಹಾಕಲ್ಪಟ್ಟರೆ ನಿಮ್ಮ ಸಮುದಾಯದಲ್ಲಿ ಯಾವ ವ್ಯತ್ಯಾಸ ಉಂಟಾಗುತ್ತದೆ?

**ಸೋಮವಾರ** **ಆಗಸ್ಟ್ 19**

## ಒಳ್ಳೆಯದರಿಂದ ಕೆಟ್ಟದ್ದನ್ನು ಸೋಲಿಸುವುದು

ಯೇಸುವಿನ ಬೋಧನೆಯನ್ನು ನಾವು ಪರಿಗಣಿಸುವಾಗ ಆತನು ಯಾರ ಬಗ್ಗೆ ಯಾವ ಸಂದರ್ಭದಲ್ಲಿ ಮಾತಾಡುತ್ತಿದ್ದಾನೆ ಎಂಬುದನ್ನು ಮನಸ್ಸಿನಲ್ಲಿಟ್ಟು ಕೊಳ್ಳುವುದು ಯೋಗ್ಯವಾಗಿದೆ. ಯೇಸುವು ತಾನು ಸೇವೆ ಆರಂಭಿಸಿದ ಪ್ರದೇಶದಲ್ಲಿ ಜನರ ದೊಡ್ಡ ದೊಡ್ಡ ಗುಂಪನ್ನು ಆಕರ್ಷಿಸಲು ಆರಂಭಿಸಿದನು (ಮತ್ತಾಯ 4:25, 5:1ನ್ನು ನೋಡಿರಿ). ಬಹುಜನರು ರೋಮ ಚಕ್ರಾಧಿಪತ್ಯಕ್ಕೆ ಒಳಪಟ್ಟ ಸಾಮಾನ್ಯ ಜನರಾಗಿದ್ದರು, ಇನ್ನು ಕೆಲವರು ಯೆಹೂದ್ಯ ಆಡಳಿತಗಾರರಾಗಿದ್ದರು, ಮತ್ತೆ ಕೆಲವರು ಧಾರ್ಮಿಕ ನಾಯಕರಾಗಿದ್ದರು.

ಸಾಮಾನ್ಯ ಜನರ ಜೀವನವು ಬಹಳ ಕಷ್ಟಕರವಾಗಿತ್ತು. ತಮ್ಮ ಜೀವನಕ್ಕೆ ಕೆಲವೇ ಆಯ್ಕೆಗಳು ಇದ್ದವು. ಜನರು ಭಾರವಾದ ತೆರಿಗೆಗಳಿಂದ ಕಂಗಾಲಾಗಿದ್ದರು ಮತ್ತು ಧಾರ್ಮಿಕ ಸಂಪ್ರದಾಯಗಳಿಂದ ಕುಂದಿಹೋಗಿದ್ದರು. ಜನರ ಸನ್ನಿವೇಶ ಯಾವುದೇ ಇದ್ದಾಗ್ಯೂ ಅವರಿಗೆ ಉತ್ತಮವಾದ ಜೀವನವನ್ನು ಜೀವಿಸುವ ಮಾರ್ಗಗಳನು ನೀಡುವ ಬಗ್ಗೆ ಕಾಳಜಿಯುಳ್ಳವನಾಗಿದ್ದು, ಗೌರವಯುತವಾಗಿ ಮತ್ತು ಧೈರ್ಯವಾಗಿ ಜೀವಿಸುವುದನ್ನು ಬೋಧಿಸುತ್ತಿದ್ದನು.

ಇಂತಹ ಒಂದು ಉದಾಹರಣೆಯು ಮತ್ತಾಯ 5:38–48ರಲ್ಲಿ ಸಿಗುತ್ತದೆ. ಇಂಗ್ಲೀಷ್ ನುಡಿಗಟ್ಟುಗಳಾದ ಮತ್ತೊಂದು ಕೆನ್ನೆ ಕೊಡು "ಮೇಲಂಗಿಯನ್ನು ಬಿಡು", ಎರಡು ಮೈಲು ಹೋಗು" ಎಂಬ ಪದಗಳು ಸರ್ವೇ ಸಾಮಾನ್ಯವಾಗಿ ಬಳಸುವ ಪದಗಳಾಗಿದ್ದವು. ಆದರೆ ಈ ಸರ್ವೇ ಮಾನ್ಯತೆ ಯೇಸುಕ್ರಿಸ್ತನು ಬೋಧಿಸುವ ಆಮೂಲಾಗ್ರ ಕೃತ್ಯಗಳು ಮತ್ತು ಧೋರಣೆಯನು ಹುಸಿಗೊಳಿಸುತ್ತಿದ್ದವು.

ಯೇಸುಕ್ರಿಸ್ತನು ವಿವರಿಸುತ್ತಿರುವ ಈ ದೃಶ್ಯಗಳು ಅವನ ಕೇಳುಗರಿಗೆ ಸಾಮಾನ್ಯವಾದ ಅನುಭವವಾಗಿದ್ದವು. ಅವರು ಆಗಾಗ್ಗೆ ತಮ್ಮ ಮೇಲಧಿಕಾರಿಗಳ

ಅಥವಾ ಯಜಮಾನರುಗಳ ಬಲತ್ಕಾರದ ಆಕ್ರಮಣಗಳಿಗೆ ಒಳಗಾಗುತ್ತಿದ್ದರು. ಅನೇಕ ವೇಳೆ ಅವರು ಸಾಲಿಗರಾಗಿ ತಮ್ಮ ಆಸ್ತಿಪಾಸ್ತಿಗಳನ್ನು ಭೂಮಾಲೀಕರಿಗೆ ಮತ್ತು ಸಾಲಕೊಟ್ಟವರಿಗೆ ಕಳೆದುಕೊಳ್ಳುತ್ತಿದ್ದರು. ಅವರು ಅನೇಕ ವೇಳೆ ರೋಮನ್ ಸೈನಿಕರ ಒತ್ತಾಯದ ಮೇರೆಗೆ ದುಡಿತಕ್ಕೆ ಎಳೆಯಲ್ಪಡುತ್ತಿದ್ದರು.

ಯೇಸುಕ್ರಿಸ್ತನು ಜನರು ಪ್ರಾಮಾಣಿಕರಾಗಿ ಸ್ಪಂದಿಸುವಂತೆ ಕಲಿಸುತ್ತಿದ್ದನು. ತಮ್ಮನ್ನು ಬಲತ್ಕರಿಸುವವರನ್ನು ಅವರ ಯೋಗ್ಯತೆಗಿಂತ ಹೆಚ್ಚಾದ ಗೌರವ ಕೊಟ್ಟು ಕಳೆದುಕೊಂಡ ಮಾನವೀಯ ನಡವಳಿಕೆಯನ್ನು ವಿರೋಧಿಸಲು ಬೋಧಿಸುತ್ತಿದ್ದನು. ಈ ಬಲಾತ್ಕಾರಿಗಳು ತಮ್ಮ ಅಧಿಕಾರವನ್ನು ಜನರ ಮೇಲೆ ಹೇರುವುದಕ್ಕೆ ಪ್ರಯತ್ನಿಸುವಾಗ ಜನರಿಗೆ ಪ್ರತಿಕ್ರಿಯೆ ಮಾಡುವುದಕ್ಕೆ ಸ್ವಾತಂತ್ರ ಉಳ್ಳವರಾಗಿದ್ದರು. ಹೀಗೆ ಶಾಂತವಾಗಿ ವಿರೋಧಿಸುತ್ತಾ ಉದಾರವಾಗಿ ಪ್ರತಿಕ್ರಿಯಿಸುತ್ತಾ ಅವರ ದುಷ್ಟತ್ವವನ್ನು ಮತ್ತು ಅನ್ಯಾಯವನ್ನು ಬಯಲು ಪಡಿಸುತ್ತಿದ್ದರು.

ಮತ್ತಾಯ 5:38–48ನ್ನು ರೋಮ 12:20,21 ರೊಂದಿಗೆ ಹೋಲಿಸಿರಿ. ಈ ಆಮೂಲಾಗ್ರ ತತ್ವಗಳನ್ನು ನಾವು ಹೇಗೆ ಜೀವಿಸಬಹುದು?

ಯೇಸುವು ಪ್ರವಾದಿಗಳನ್ನು ಮತ್ತು ಧರ್ಮಶಾಸ್ತ್ರದಲ್ಲಿ ಸಾರಾಂಶವನ್ನು (ತಾತ್ಪರ್ಯವನ್ನು) ಎಲ್ಲಾ ಪರಿಶುದ್ಧ ಬರಹಗಳನ್ನು ವಿವರಿಸುತ್ತಿದ್ದನು. ಅದು ಹಳೆಯ ಒಡಂಬಡಿಕೆಯಾಗಿತ್ತು. ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ. ಇದು ತಾನೆ ಸರಳವಾದ 'ಸುವರ್ಣಸೂತ್ರ'ವೆಂದು ತಿಳಿಸಲ್ಪಟ್ಟಿದೆ (ಮತ್ತಾಯ 7:12). ಈವಾಗ ಯಾವ ವಿಧವಾಗಿ ನೀವು ಆತನ ಆಜ್ಞೆಗಳನ್ನು ಅನುಸರಿಸುವ ಪ್ರಯತ್ನ ಮಾಡುವಿರಿ?

**ಮಂಗಳವಾರ** **ಆಗಸ್ಟ್ 20**

## ಒಳ್ಳೆಯ ಸಮಾರ್ಯದವನು

ಓದಿರಿ : ಲೂಕ 10:25–27. ಧರ್ಮೋಪದೇಶಕನು ಯೇಸುಕ್ರಿಸ್ತನನ್ನು ನಿತ್ಯಜೀವ ಪಡೆಯುವುದಕ್ಕೆ ಏನು ಮಾಡಬೇಕೆಂದು ಕೇಳಿದಾಗ ಕ್ರಿಸ್ತನು ಹಳೆಯ

ಒಡಂಬಡಿಕೆಯ ಎರಡು ಆಜ್ಞೆಗಳು ಹೇಗೆ ದೇವರಿಗೆ ಮೆಚ್ಚಿಕೆಯಾದ ಜೀವನವನ್ನು ನಡೆಸಲು ಸಹಾಯ ಮಾಡುತ್ತವೆ ಎಂದು ತಿಳಿಸಿದನು. ಆಜ್ಞೆಗಳು ಹೇಗೆ ಒಂದಕ್ಕೊಂದು ಬೆಸೆದುಕೊಂಡಿವೆ? ಧರ್ಮೋಪದೇಶಕನು ಯೇಸುಕ್ರಿಸ್ತನನ್ನು ಪ್ರಶ್ನೆ ಮಾಡಿದಾಗ ಆತನ ಉತ್ತರವು ಕೇಳುಗನು ಬಯಸುವಂತೆ ಕಡೆಯು ತುಂಬ  ವಿಭಿನ್ನವಾಗಿರುತ್ತಿತ್ತು.

ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು ಯಾ.ಕಾಂಡ 19:18 ಎಂಬ ಆಜ್ಞೆಯನ್ನು ಅನೇಕ ಧಾರ್ಮಿಕ ಜನರು 'ನಮ್ಮ ನೆರೆಯವನು ತತ್ವದ' ಇತಿಮಿತಿಯ ಬಗ್ಗೆ ಬಹಳಷ್ಟು ಶಕ್ತಿಸಮಯವನ್ನು ಕಳೆದಿದ್ದರೆಂದು ಕಾಣಿಸುತ್ತದೆ. ಯೇಸುಕ್ರಿಸ್ತನು ಈಗಾಗಲೆ ತನ್ನ ಹಿಂಬಾಲಕರಿಗೆ ಈ ಪದದ ಅರ್ಥವನ್ನು ಹಿಗ್ಗಿಸಿ ಹೇಳಲು ಬಯಸಿದ್ದನು. ನಾವು ನಮ್ಮ ನೆರೆಯವರಿಗೆ ಮಾತ್ರವಲ್ಲ ಸರ್ವರಿಗೂ ಒಳ್ಳೆಯದನ್ನೇ ಮಾಡಬೇಕೆಂದು ಹೇಳುತ್ತಿದ್ದನು. "ಆದರೆ ನಾನು ನಿಮಗೆ ಹೇಳುವುದೇನೆಂದರೆ ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ" (ಮತ್ತಾಯ 5:43–45).

ಆದರೆ ಧರ್ಮಶಾಸ್ತ್ರ ಪ್ರವೀಣನು ಯೇಸುಕ್ರಿಸ್ತನನ್ನು ಪರೀಕ್ಷಿಸಲು ಬಯಸಿದಾಗ ಆತನು ಬಹಳವಾಗಿ ಚರ್ಚಿತವಾಗುವ "ನನ್ನ ನೆರೆಯವನು ಯಾರು?" ಎಂಬ ಪ್ರಶ್ನೆಯನ್ನೇ ಕ್ರಿಸ್ತನಿಗೆ ಹಾಕಿದನು (ಲೂಕ 10:29). ಅದಕ್ಕೆ ಪ್ರತಿಯಾಗಿ ಯೇಸುಕ್ರಿಸ್ತನು ಒಳ್ಳೆಯ ಸಮಾರ್ಯದವನ ಕಥೆ ಹೇಳಿದನು. ಧರ್ಮೋಪದೇಶಕನು ಕೇಳಿದ ಪ್ರಶ್ನೆ 'ನನ್ನ ನೆರೆಯವನು ಯಾರು? ಎಂಬುದನ್ನು ವಾಕ್ಯಾನಪಡಿಸುವುದಕ್ಕಲ್ಲ ಅದಕ್ಕೆ ಬದಲಾಗಿ ಯಾರ್‍ಯಾರಿಗೆ ನಿಮ್ಮ ಸಹಾಯ ಬೇಕಾಗಿದೆಯು ಅವರಿಗೆ ನೀವೇ ನೆರೆಯವರಾಗಿರಿ ಎಂದು ಹೇಳಿದನು (ಲೂಕ 10:36,37ನ್ನು ನೋಡಿರಿ).

ಓದಿರಿ ಲೂಕ 10:30–37 ಸಹಾಯದ ಅವಶ್ಯಕತೆಯಿರುವ ಮನುಷ್ಯನನ್ನು ನೋಡಿದ ಮೂರು ಪಾತ್ರಗಳ ನಡುವೆ ಇರುವ ವ್ಯತಿರಿಕ್ತತೆಯ ಮಹತ್ವವೇನು?

ಯೇಸುಕ್ರಿಸ್ತನ ಬೋಧನೆಯಲ್ಲಿರುವ ಸಾಮಾನ್ಯತೆಯಂತೆ ಯಾರು ತಮ್ಮನ್ನು ಧಾರ್ಮಿಕ ವ್ಯಕ್ತಿಗಳಂತೆ ಬಿಂಬಿಸಿಕೊಂಡು ಕಷ್ಟದಲ್ಲಿರುವವರ ವಿಷಯದಲ್ಲಿ ನಿಷ್ಕಾಳಜಿಯುಳ್ಳವರಾಗಿರುತ್ತಿದ್ದರೋ ಅವರನ್ನು ಕ್ರಿಸ್ತನು ತೀವ್ರವಾಗಿ ಟೀಕಿಸುತ್ತಿದ್ದನು. ಸಾಮಾರ್ಯದವನ ಕಥೆಯನ್ನು ಕ್ರಿಸ್ತನು ನಿಜವಾದ ಧಾರ್ಮಿಕತೆಯ ಗುಣಲಕ್ಷಣಕ್ಕೆ ನಿದರ್ಶನವಾಗಿ ಕ್ರಿಸ್ತನು ಬಳಸಿದನು. ಇದು ಧರ್ಮನಿಯಮಗಳಲ್ಲಿರದೆ ಪ್ರೀತಿಯ ಕೃತ್ಯಗಳನ್ನೆಸಗುವುದರಲ್ಲಿದೆ ಇತರರಿಗೆ ಒಳ್ಳೆಯದಾಗುವುದನ್ನು ಬಯಸುವುದೇ ನಿಜವಾದ ಒಳ್ಳೆಯತನವಾಗಿದೆ– ಎಲೆನ್ ಜಿ ವೈಟ್‌ರವರ The Desire of Ages ಪುಸ್ತಕದ ಪುಟ 497.

ಕ್ರಿಸ್ತನು ತನ್ನ ಅನುಯಾಯಿಗಳೆಂದು ಹೇಳಿಕೊಳ್ಳುವವರಿಗೆ ದೇವರಿಂದ ಎಂಥಾ ಕರೆ ಎಂಬುದನ್ನು ತೋರಿಸಲು ದೇವರಿಗೆ ನಂಬಿಗಸ್ತರಲ್ಲದವರೆಂದು ಪರಿಗಣಿಸಲ್ಪಡುವ ಹೊರಗಿನವರನ್ನು ಕುರಿತು ತನ್ನ ಬೋಧನೆಯಲ್ಲಿ ಹೇಳುತ್ತಿದ್ದನು. ನಿತ್ಯಜೀವನವನ್ನು ಪಡೆಯಲು ಏನು ಮಾಡಬೇಕೆಂದು ಕೇಳಿದವನಿಗೆ ಹೇಳಿದಂತೆಯೇ ನಮಗೂ ಹೇಳುವುದೇನೆಂದರೆ ನಿಮ್ಮ ಅವಶ್ಯಕತೆಯಾರಿಗಿದೆಯೋ ಅವರ ಹತ್ತಿರ ಹೋಗಿ ನೆರೆಯವರಾಗಿರಿ ಎಂದು ಬೋಧಿಸುತ್ತಾನೆ.

**ಬುಧವಾರ** **ಆಗಸ್ಟ್ 21**

## ಶ್ರೀಮಂತನು ಮತ್ತು ಲಾಜರನು

ಶ್ರೀಮಂತನು ಮತ್ತು ಲಾಜರನು ಸಾಮಾನ್ಯದಲ್ಲಿ (ಲೂಕ 16:19–31ನ್ನು ನೋಡಿರಿ). ಯೇಸುವು ಇವರಿಬ್ಬರ ನಡುವೆ ಇರುವ ವೈರುಧ್ಯತೆಯನ್ನು ತೋರಿಸುತ್ತಾನೆ. ಸಮಾಜ ಕಲ್ಯಾಣ ಇಲಾಖೆ, ಸಮುದಾಯ ಆಸ್ಪತ್ರೆ, ಅನ್ನಛತ್ರಗಳು ಇಲ್ಲದಿರುವಲ್ಲಿ ಬಡವರು ತಮ್ಮ ಹಸಿವು ನೀಗಿಸಿಕೊಳ್ಳಲು ಉಳ್ಳವರ ಮನೆಯ ಮುಂದೆ ನಿಂತು ಬೇಡುವುದು. ಸರ್ವೇ ಸಾಮಾನ್ಯವಾದ ಅಭ್ಯಾಸವಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಉಳ್ಳವರು ಉದಾರಿಗಳಾಗಿದ್ದು ತಮ್ಮಲ್ಲಿರುವುದನ್ನು ಅವರೊಂದಿಗೆ ಹಂಚಿಕೊಳ್ಳುತ್ತಾರೆ. ಆದರೆ ಈ ಕಥೆಯಲ್ಲಿ ಬರುವ ಶ್ರೀಮಂತನು ಸಹೋದರನೊಬ್ಬನು ಕೊರತೆಯಲ್ಲಿರುವುದನ್ನು ನೋಡಿ ಉದಾಸೀನತೆಯನ್ನು ತೋರುವ ಸ್ವಾರ್ಥಿಯಾಗಿದ್ದಾನೆ. ಎಲೆನ್ ಜಿ ವೈಟ್‌ರವರ Christ Object Lessons ಪುಸ್ತಕದ ಪುಟ 261 ನಿಜಜೀವನದಲ್ಲಿ ಇವರಿಬ್ಬರ ಸನ್ನಿವೇಶಗಳು

ಬದಲಾಗದೆ ಉಳಿಯುತ್ತವೆ. ಆದರೆ ಮರಣದಲ್ಲಿ ದೇವರ ನ್ಯಾಯತೀರ್ಪಿನ ನಂತರ ಈರ್ವರ ಸ್ಥಿತಿಯು ನಾಟಕದಲ್ಲಿ ದೃಶ್ಯವು ಬದಲಾಗುವಂತೆ ಅದಲು ಬದಲಾಗುತ್ತದೆ.

ಲೂಕ 16:19–31ನ್ನು ಲೂಕ 12:13–21ರ ಜೊತೆ ಹೋಲಿಸಿರಿ ಇವುಗಳಲ್ಲಿ ಕಂಡುಬರುವ ಸಾಮಾನ್ಯತೆ ಮತ್ತು ಭಿನ್ನತೆಗಳೇನು? ಇವೆರಡು ಕಥೆಗಳು ನಮಗೆ ಏನನ್ನು ಬೋಧಿಸುತ್ತವೆ?

ಈ ಎರಡೂ ಕಥೆಗಳಲ್ಲಿ ಕಂಡುಬರುವ ಶ್ರೀಮಂತನು ಸಲ್ಲದ ಮಾರ್ಗದಲ್ಲಿ ಶ್ರೀಮಂತನಾಗಿರುವುದಕ್ಕೆ ಯಾವ ಪುರಾವೆಯೂ ಇಲ್ಲ. ಬಹುಶಃ ಈರ್ವರೂ ಪರಿಶ್ರಮಿಗಳಾಗಿದ್ದು ಜಾಗ್ರತೆಯುಳ್ಳವರಾಗಿ ದೇವರಿಂದ ಆಶೀರ್ವದಿಸಲ್ಪಟ್ಟವರಾಗಿರಬಹುದು. ಆದರೆ ಜೀವನ ದೇವರು, ಹಣ, ಇವುಗಳ ಬಗ್ಗೆ ಅವರಿಗಿರುವ ಧೋರಣೆಯಲ್ಲಿ ತಪ್ಪು ಕಂಡುಬರುತ್ತಿದೆ. ಇದು ಅವರಿಗೆ ಶಾಶ್ವತವಾದ ಮಹತ್ವವಾದ ಬೆಲೆ ತರುವಂಥದ್ದಾಗಿದೆ.

ಯೇಸುಕ್ರಿಸ್ತನ ಕಾಲದಲ್ಲಿದ್ದ ಜನಪ್ರಿಯ ಕಲ್ಪನೆಯಂತೆ ನಾವು ಈ ಜೀವಿತದಲ್ಲಿ ಮಾಡುವ ಆಯ್ಕೆಗಳು ಶ್ರೀಮಂತ ಮತ್ತು ಲಾಜರನ ಕಥೆಯು ಬೋಧಿಸುತ್ತದೆ. ನಮ್ಮ ಸಹಾಯದ ಅಗತ್ಯತೆ ಇರುವವರಿಗೆ ಅಥವಾ ಬಯಸುವವರಿಗೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದು ನಮ್ಮ ಆಯ್ಕೆಗಳನ್ನು ಮತ್ತು ಆದ್ಯತೆಗಳನ್ನು ತೋರ್ಪಡಿಸುತ್ತವೆ. ಅಬ್ರಹಾಮನು ನರಕದಲ್ಲಿ ಯಾತನೆ ಪಡುತ್ತಿರುವ ಮನುಷ್ಯನನ್ನು ತೋರಿಸುವಂತೆಯೇ ಸತ್ಯವೇದವು ಒಳ್ಳೆಯದನ್ನು ಆಯ್ದುಕೊಳ್ಳಲು ಸಾಕಷ್ಟು ಮಾರ್ಗದರ್ಶನವನ್ನು ನೀಡುತ್ತದೆ. ಈ ಸಾಮ್ಯದಲ್ಲಿ "ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ" ಎಂದು ಅಬ್ರಹಾಮನು ಹೇಳುತ್ತಾನೆ (ಲೂಕ 16:29).

ಶ್ರೀಮಂತಿಕೆಯನ್ನು ಹೊಂದಿರುವುದರಿಂದ ಅದನ್ನು ಕಾಪಾಡುವುದರಿಂದ ಇಲ್ಲವೇ ಬಯಸುವುದರಿಂದ ಅದು ನಮ್ಮನ್ನು ದೇವರ ರಾಜ್ಯದಿಂದ ದೂರಕ್ಕೆ ಎಳೆಯುತ್ತದೆ ಮತ್ತು ನಾವು ಜನರಿಂದ ದೂರಾಗಿ ಸ್ವಾರ್ಥರಾಗುತ್ತೇವೆ. ಸ್ವವಿಶ್ವಾಸಿಗಳಾಗುತ್ತವೆ ಎಂದು ಯೇಸು ಬೋಧಿಸಿದನು.

ನಾವು ಮೊದಲು ಆತನ ರಾಜ್ಯಕ್ಕಾಗಿ ತವಕಪಡಬೇಕೆಂದು ಮತ್ತು ನಮಗಿರುವ ಆಶೀರ್ವಾದಗಳನ್ನು ಇತರರೊಟ್ಟಿಗೆ ಅದರಲ್ಲೂ ಅವಶ್ಯಕತೆ ಇರುವವರೊಟ್ಟಿಗೆ ಹಂಚಿಕೊಳ್ಳುವುದಕ್ಕಾಗಿ ಕ್ರಿಸ್ತನು ನಮ್ಮನ್ನು ಕರೆಯುತ್ತಾನೆ. ಕ್ರೈಸ್ತನಾದವನೊಬ್ಬನು ಹಣಕಾಸಿನ ಸ್ಥಿತಿ ಏನೇ ಆಗಿರಲಿ ಅವನನ್ನು ಹಣದ ಆಸೆಯು ಕ್ರೈಸ್ತೀಯ ಜೀವಿತದ ನೋಟವನ್ನು (ದೃಷ್ಟಿಯನ್ನು) ಕೆಡಿಸದೆ ಹಾಗೆ ಎಚ್ಚರಿಕೆಯಾಗಿರುವುದು ಹೇಗೆ?

**ಗುರುವಾರ** **ಆಗಸ್ಟ್ 22**

## ಇವರಲ್ಲಿ ಕನಿಷ್ಠನಾದವನೊಬ್ಬನು

ಮತ್ತಾಯ 24 ಮತ್ತು 25 ರಲ್ಲಿ ಜನರ ಪ್ರಶ್ನೆಗೆ ಕ್ರಿಸ್ತನು ಅವರು ನಿರೀಕ್ಷಿಸದ ಉತ್ತರವನ್ನು ಕೊಟ್ಟು ಸನ್ನಿವೇಶವು ಆತನು ಮಾಡಿದ ಪ್ರಸಂಗದಲ್ಲಿದೆ. ಆತನ ಶಿಷ್ಯರು ಯೆರೂಸಲೇಮಿನ ದೇವಾಲಯದ ನಾಶನದ ಬಗ್ಗೆ ಮತ್ತು ಆತನ ಎರಡನೇ ಬರೋಣದ ಬಗ್ಗೆ ಕೇಳಿದರು (ಮತ್ತಾಯ 24:1–3). ಯೇಸುಕ್ರಿಸ್ತನು ಅವರ ಪ್ರಶ್ನೆಗೆ ಉತ್ತರಿಸಿ ಹಸಿದವರಿಗೆ ಅನ್ನವಿಕ್ಕುವುದು, ಬಾಯಾರಿದವರಿಗೆ ನೀರು ಕೊಡುವುದು, ಅಲೆಯುವವರನ್ನು ಮನೆಗೆ ಬರಮಾಡಿಕೊಳ್ಳುವುದು ಬೆತ್ತಲೆಯವರನ್ನು ಕಂಡಾಗಲೆಲ್ಲಾ ಅವರಿಗೆ ಹೊದಿಸುವುದು, ಅಸ್ವಸ್ಥನಾದವರನ್ನು ಉಪಚರಿಸುವುದು, ಸೆರೆಮನೆಯಲ್ಲಿರುವವರನ್ನು ಭೇಟಿ ಮಾಡುವುದು ಇವುಗಳನ್ನೆಲ್ಲಾ ಕನಿಷ್ಟರಾದ ಸೋದರ ಸೋದರಿಯರಿಗೆ ಮಾಡಿದಾಗ ಇಲ್ಲವೇ ಮಾಡದೆ ಹೋದಾಗ ಅದನ್ನು ತನಗೆ ಮಾಡಿದ ಹಾಗಾಯ್ತು ಎಂದು ಹೇಳುತ್ತಾನೆ (ಮತ್ತಾಯ 25:40,45).

ಅಂತಿಮ ನ್ಯಾಯತೀರ್ಪಿನ ಬಗ್ಗೆ ಕೇಳಿದ ಪ್ರಶ್ನೆಗೆ ಸಂಬಂಧಪಟ್ಟ ಪ್ರಸಂಗವು (ಬೋಧನೆಯು) ಇದಾಗಿದೆ. ಮತ್ತಾಯ 24ನೇ ಅಧ್ಯಾಯದಾದ್ಯಂತ ಯೇಸುಕ್ರಿಸ್ತನು ತನ್ನ ಶಿಷ್ಯರು ಯೆರೂಸಲೇಮಿನ ನಾಶನದ ವಿಷಯದಲ್ಲಿ ಮತ್ತು ಯುಗ ಸಮಾಪ್ತಿಯಲ್ಲಿ ನಡೆಯುವ ಸೂಚನೆಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೇರವಾದ ಉತ್ತರಗಳು ಎಚ್ಚರಿಕೆಗಳು ಸೂಚನೆಗಳು ಇಲ್ಲಿವೆ. ಆತನ ಎರಡನೇ ಬರೋಣ ಸಂದರ್ಭದಲ್ಲಿ ಬಹಳ ಎಚ್ಚರವಾಗಿರಬೇಕಾದ ಅವಶ್ಯಕತೆಯನ್ನು ಒತ್ತುಕೊಟ್ಟು ಹೇಳುತ್ತಾನೆ. 2ನೇ ಅಧ್ಯಾಯದ ಮೊದಲ ಭಾಗದಲ್ಲಿ ಆತನ ಅನಿರೀಕ್ಷಿತ

ಮತ್ತು ವಿಳಂಬಿತ ಬರೋಣಕ್ಕೆ ಸಿದ್ಧಪಡಿಸಿಕೊಳ್ಳುವ ಬುದ್ಧಿವಂತ ಮತ್ತು ಮೂರ್ಖ ಕನ್ನಿಕೆಯರ  ಕಥೆಯಿದೆ.

ನಂತರ ಆತನಿಗೋಸ್ಕರ ಕಾದುಕೊಂಡಿರುವವರು ಹೇಗೆ ಚೆನ್ನಾಗಿ ಉತ್ಪಾದನೆ ಮಾಡುವವರಾಗಿರಬೇಕೆಂದು ತಿಳಿಸುವ ಮೂರು ಸೇವಕರ ಕಥೆ ಆಮೇಲೆ ದೇವಜನರು ನಿರ್ದಿಷ್ಟವಾಗಿ ಯಾವ ಕಾರ್ಯಗಳಲ್ಲಿ ನಿರತರಾಗಿರಬೇಕು ಎಂದು ಹೇಳುವ ಆಡು ಮತ್ತು ಕುರಿಗಳ ಸಾಮ್ಯವಿದೆ.

ಮತ್ತಾಯ 25:31–46ನ್ನು ಓದಿರಿ. ಕ್ರಿಸ್ತನು ಇಲ್ಲಿ ಏನು ಹೇಳುತ್ತಾನೆ? ಇದು ನಮ್ಮ ರಕ್ಷಣೆಯು ನಾವು ಮಾಡುವ ಕೆಲಸದಿಂದಲ್ಲವೆಂದು ಹೇಳುತ್ತದೆ ಏಕೆ? ನಮ್ಮನ್ನು ರಕ್ಷಿಸುವ ನಂಬಿಕೆಯ ಬಗ್ಗೆ ಆತನ ವಾಕ್ಯಗಳು ಏನು ಹೇಳುತ್ತವೆ?

ನೀವು ಕನಿಷ್ಠರಾದವರೊಬ್ಬರಿಗೆ ಮಾಡಿದುದು ನನಗೂ ಮಾಡಿದ ಹಾಗಾಯ್ತು ಎಂದು ಹೇಳುವ ಕ್ರಿಸ್ತನ ನುಡಿಗಳು ನಮ್ಮ ಸಂಬಂಧಗಳನ್ನು ಮತ್ತು ಧೋರಣೆಗಳನ್ನು ಬದಲಾಯಿಸುತ್ತದೆ. ಯೇಸುಕ್ರಿಸ್ತನನ್ನು ಊಟಕ್ಕೆ ಕರೆಯುವುದನ್ನು ಆತನನ್ನು ಸೆರೆಮನೆಯಲ್ಲಿ ಅಥವಾ ಆಸ್ಪತ್ರೆಯಲ್ಲಿ ಸಂಧಿಸುದುದನ್ನು ಕಲ್ಪಿಸಿಕೊಳ್ಳಿರಿ. ನಮ್ಮ ನೆರೆಹೊರೆಯವರಿಗೆ, ಸಮುದಾಯದಲ್ಲಿರುವ ಜನರಿಗೆ ಸೇವೆಯನ್ನು ಮಾಡುವಾಗ ಆತನಿಗೆ ಮಾಡಿದಂಥಾಗುತ್ತದೆ ಎಂದು ಹೇಳುತ್ತಾನೆ. ಈ ರೀತಿಯಲ್ಲಿ ನಮಗೆ ಒದಗಿ ಬರುವ ಅವಕಾಶವು ಎಷ್ಟು ನಂಬಲಸಾಧ್ಯವಾಗಿದೆ!

ಈ ಮಾತುಗಳಲ್ಲಿ ಕ್ರಿಸ್ತನು ಏನು ಹೇಳಿದ್ದಾನೆಂದು ಪ್ರಾರ್ಥನ ಪೂರ್ವಕವಾಗಿ ಓದಿರಿ. ಯೇಸು ತನ್ನನ್ನು ತಾನು ಹಸಿದವನಿಗೆ, ಬೆತ್ತಲೆಯಾದವನಿಗೆ, ಸೆರೆಮನೆಯಲ್ಲಿದ್ದವನಿಗೆ ಹೋಲಿಸಿಕೊಂಡಿರುವುದನ್ನು ನೀವು ಹೇಗೆ ಅರ್ಥ ಮಾಡಿಕೊಳ್ಳುತ್ತೀರಿ? ಎಂಥಾ ಬಲಯುತವಾದ ಕರ್ತವ್ಯವನ್ನು ನಮ್ಮ ಮೇಲೆ ಹಾಕುತ್ತದೆ?

**ಶುಕ್ರವಾರ** **ಆಗಸ್ಟ್ 23**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್‌ರವರ "The Good Samaritan" ಪುಸ್ತಕದಲ್ಲಿ ಪುಟ 497–505 ಮತ್ತು "The Least of These Brethren" ಪುಟ  637–641.

"The Desire of Ages" ಪುಸ್ತಕದಲ್ಲಿ ಪುಟ 260–271. "Great Gulf is fixed" ಪುಟ 376–389, "Christ's object Lessons ಪುಸ್ತಕ.

"ಕ್ರಿಸ್ತನು ಮನುಷ್ಯರನ್ನು ಅಗಲಿಸುವ ಗೋಡೆಗಳನ್ನು ಸ್ವಪ್ರೀತಿಯನ್ನು ವಿಭಾಗಿಸುವ ಜನಾಂಗೀಯ ಪೂರ್ವಾಗ್ರಹವನ್ನು ತೆಗೆದುಹಾಕುತ್ತಾನೆ ಮತ್ತು ಇಡೀ ಮಾನವ ಕುಟುಂಬಕ್ಕೆ ಪ್ರೀತಿಯನ್ನು ಕಲಿಸುತ್ತಾನೆ. ಆತನು ಮನುಷ್ಯರಲ್ಲಿ ಸ್ವಾರ್ಥವು ತುಂಬಿದ ಸಂಕುಚಿತಭಾವವನ್ನು ತೆಗೆಯುತ್ತಾನೆ; ಆತನು ಎಲ್ಲಾ ಪ್ರಾಂತೀಯ ಎಲ್ಲೆಗಳನ್ನು ಮತ್ತು ಸಮಾಜದಲ್ಲಿರುವ ಕೃತಕವಾದ ಭಿನ್ನತೆಗಳನ್ನು ತೆಗೆದು ಹಾಕುತ್ತಾನೆ; ಆತನು ನೆರೆಹೊರೆಯವರು ಮತ್ತು ಅಪರಿಚಿತರ ನಡುವೆ, ಸ್ನೇಹಿತರ ಮತ್ತು ವೈರಿಗಳ ನಡುವೆ ಯಾವ ವ್ಯತ್ಯಾಸವನ್ನು ಮಾಡುವುದಿಲ್ಲ. ಅಗತ್ಯವಿರುವ ಪ್ರತಿ ಆತ್ಮಗಳನ್ನು ನಮ್ಮ ನೆರೆಯವರೆಂದು ಮತ್ತು ಇಡೀ ಲೋಕವನ್ನೇನಮ್ಮ ಕಾರ್ಯಕ್ಷೇತ್ರದಂತೆ ನೋಡಬೇಕೆಂದು ಬೋಧಿಸುತ್ತಾನೆ. ಎಲೆನ್ ಜಿ ವೈಟ್‌ರವರ "Thought from the Mount of Blessing" ಪುಟ 42.

ಸುವರ್ಣ ಸೂತ್ರದ ಮಾನದಂಡವೇ ನಿಜವಾದ ಕ್ರೈಸ್ತೀಯ ಮಾನದಂಡವಾಗಿದೆ. ಅದರೆ ಕಡಿಮೆಯಾದದು ಕೇವಲ ಒಂದು ವಂಚನೆಯಾಗಿದೆ. ಕ್ರಿಸ್ತನು ತನ್ನ ಪ್ರಾಣವನ್ನೇ ಅರ್ಪಿಸುವಷ್ಟು ಬೆಲೆ ಹೊಂದಿದ ಮನುಷ್ಯರನ್ನು ಕಡಿಮೆಯಾಗಿ ಕಾಣುವ ಮತ್ತು ಅವರ ಅಗತ್ಯಗಳನ್ನಾಗಲಿ ಕಷ್ಟಗಳನ್ನಾಗಲಿ, ಹಕ್ಕುಗಳನ್ನಾಗಲಿ, ಲಕ್ಷಿಸದ ಧರ್ಮವು ಸುಳ್ಳು ಧರ್ಮವಾಗಿರುತ್ತದೆ. ಬಡವರ ಮತ್ತು ಪಾಪಿಗಳ ಬೇಡಿಕೆಗಳಿಗೆ, ನೋವುಗಳಿಎ ಸ್ಪಂದಿಸದೆ ಉಪೇಕ್ಷೆ ಮಾಡುವವರು ಯೇಸುಕ್ರಿಸ್ತನಿಗೆ ತಮ್ಮನ್ನು ತಾವು ದ್ರೋಹಿಗಳಾಗಿ ಮಾಡಿಕೊಳ್ಳುತ್ತಾಎ.

ಜನರು ಕ್ರಿಸ್ತನ ಹೆಸರನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರೆ ತಮ್ಮ ಜೀವಿತದಲ್ಲಿ ಆತನ ನಡವಳಿಕೆಯನ್ನು ನಿರಾಕರಿಸುತ್ತಾರೆ. ಹಾಗಾಗಿ ಕ್ರೈಸ್ತತ್ವದ ಬಲವು ಈ ಲೋಕದಲ್ಲಿ ಬಹಳ ಕಡಿಮೆಯಾಗಿದೆ. ಎಲೆನ್ ಜಿ ವೈಟ್‌ನವರ Thoughts from the Mount of Blessing, ಪುಟ 136, 137.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ವಾರದ ಪಾಠದಲ್ಲಿ ನಿಮಗಿಷ್ಟವಾದ ಭಾಗ ಯಾವುದು? ಮತ್ತು ಯಾಕೆ?

2. ಎಲೆನ್ ಜಿ ವೈಟಮ್ಮನವರು ಹೇಗೆ ನಮ್ಮ ನಂಬಿಕೆಯು ಅಗತ್ಯತೆಗಳಿಗೆ, ನೋವುಗಳಿಗೆ ಅಥವಾ ಹಕ್ಕುಗಳಿಗೆ ನಿಷ್ಕಾಳಜಿಯುಳ್ಳವನಾಗಿ ನಡೆಸುವ ಧರ್ಮವು ಖೋಟವಾಗಿರುತ್ತದೆ ಎಂಬುದರ ಬಗ್ಗೆ ಬರೆಯುತ್ತಾರೆ? ನಾವು ನಮ್ಮಲ್ಲಿ ಸತ್ಯವಿದೆ ಮತ್ಯಾವುದು ಅಗತ್ಯವಿಲ್ಲ ಎಂಬುದನ್ನು ಆಲೋಚಿಸುವರಾಗಿ ಸುಲಭವಾಗಿ ಮೋಸ ಹೋಗುವುದನ್ನು ತಪ್ಪಿಸಿಕೊಳ್ಳಲು ನಾವು ಹೇಗೆ ಎಚ್ಚರಿಕೆ ವಹಿಸಬೇಕು?

3. ಹೇಗೆ ಗುರುವಾರದ ಪಾಠದಲ್ಲಿರುವ ವಾಕ್ಯಗಳು ಸತ್ಯವನ್ನು ಹೊಂದಿರುವುದು ಎಂದರೆ ಏನನ್ನು ಒಳಗೊಂಡಿದೆ ಎಂದು ತಿಳಿಸುತ್ತದೆ?

**ಸಾರಾಂಶ :** ದೇವರ ರಾಜ್ಯದ ಪ್ರಜೆಗಳಿಗೂ ಕಾರ್ಯಕರ್ತರಿಗೂ ಭಿನ್ನವಾಗಿ ಬಾಳುವ ಬಗೆಯನ್ನು ಕ್ರಿಸ್ತನ ಬೋಧನೆಗಳು ಆರಂಭಿಸುತ್ತವೆ. ಹಳೆ ಒಡಂಬಡಿಕೆಯ ಪರಿಶುದ್ಧ ಶಾಸ್ತ್ರಗಳ ಅಡಿಪಾಯದ ಮೇಲೆ ಕಟ್ಟುವವನಾಗಿ ಬಡವರನ್ನು ಮತ್ತು ಶೋಷಿತರನ್ನು ಆದರಿಸುವುದಕ್ಕೆ ತನ್ನ ಗಮನವನ್ನು ಹಿರಿದು ಮಾಡುತ್ತಾನೆ; ಆತನ ಬರೋಣವನ್ನು ಎದುರು ನೋಡುತ್ತಿರುವಾಗ ಆತನ ಹಿಂಬಾಲಕರು ಅನುಕಂಪ ಮತ್ತು ಕರುಣೆಯುಳ್ಳವರಾಗಿ ಜೀವಿಸಬೇಕೆಂದು ಒತ್ತಾಯಿಸುತ್ತಾನೆ.